ಪುಳಕ ಉಂಟಾಗುತ್ತಿತ್ತು. ಅಂಥಾ ಮೂಗನ್ನು ಕಳೆದುಕೊಳ್ಳುವುದೆಂದರೆ ಏನೆಂದು ನನ್ನ ಹೊರತು ಬೇರೆ ಯಾರಿಗೂ ಅರ್ಥವಾಗುವುದಿಲ್ಲ. ಆದರೂ ಅದನ್ನೆಲ್ಲಾ ಸಹಿಸಿದ್ದೆ. ವಿರೂಪದಿಂದಾಗಿ ಉಂಟಾಗುವ ವಿಕೃತವಾದ ಯೋಚನೆಗಳ ಭಾರವನ್ನೆಲ್ಲಾ ಹೊತ್ತಿದ್ದೆ. ಒಮ್ಮೊಮ್ಮೆ ನನಗೆ ಎಲ್ಲರನ್ನೂ, ಎಲ್ಲವನ್ನೂ ವಿರೂಪಗೊಳಿಸಬೇಕೆನಿಸುತ್ತಿತ್ತು. ಆ ಸಿಡುಕಿನಿಂದ ಹೊರಬರಲು, ಮರಳಿ ಸೌಂದರ್ಯವನ್ನು ಪ್ರೀತಿಸಲು, ರೂಪ–ಅರೂಪಗಳ ನಿಜ ಸಾರಾಂಶವನ್ನು ಕಂಡುಕೊಳ್ಳಲು ನನ್ನೊಂದಿಗೆ ನಾನು ದೊಡ್ಡ ಯುದ್ಧವನ್ನೇ ಮಾಡಬೇಕಾಯಿತು. ಆ ಯುದ್ಧದಲ್ಲಿ ನನಗೆ ಸಹಕಾರ ನೀಡಿದ್ದು ಈ ಅನಂತ ಪ್ರಕೃತಿ. ಪ್ರಕೃತಿಗೆ ರೂಪ, ಕುರೂಪವೆಂಬ ಭೇದಗಳಿಲ್ಲವೆಂದು ಗ್ರಹಿಸಲು ತುಂಬಾ ಕಷ್ಟಪಟ್ಟೆ. ಅನೇಕ ಜೀವಿಗಳನ್ನೂ, ಮತ್ತವುಗಳ ಜೀವನಕ್ರಮವನ್ನೂ ಗಮನಿಸಿದೆ. ಸ್ತಬ್ಧತೆ–ಚಲನೆಯಲ್ಲಿಯ ಏಕತೆಯನ್ನು ಕಂಡುಕೊಂಡೆ. ಬಣ್ಣಗಳ ರಹಸ್ಯವನ್ನು ಅರಿತೆ. ಇದೆಲ್ಲದಕ್ಕೆ ನನಗೆ ಯಾವ ಗುರುವೂ ಇರಲಿಲ್ಲ. ನಾನೇ ಸ್ವತಃ ಸಾಧಿಸಿದೆ. ಪ್ರಕೃತಿಯೊಳಗಿನ ಅಣುಅಣುವನ್ನೂ ಶೋಧಿಸಿದೆ. ಆ ಶೋಧನೆಯಲ್ಲಿ ನನ್ನ ಕಣ್ಣುಗಳೇ ಬದಲಾಗಿಬಿಟ್ಟವು. ನನ್ನ ಕಣ್ಣಿಗೆ ಪ್ರತಿಯೊಂದೂ ಸುಂದರವಾಗಿ ಕಾಣತೊಡಗಿತು. ನನ್ನನ್ನೂ ಒಳಗೊಂಡು ಪ್ರತಿಯೊಂದನ್ನೂ ಅಸಹ್ಯದಿಂದ ಕಾಣುತ್ತಿದ್ದ ನಾನು, ನನ್ನನ್ನೂ ಸೇರಿದಂತೆ ಸುತ್ತಲಿನ ಎಲ್ಲವನ್ನೂ ಪ್ರೀತಿಸುತ್ತಾ ಬಂದೆ. ಹಕ್ಕಿಗಳೆರಡು ಯಾವುದೋ ಕಾರಣಕ್ಕೆ ಹಕ್ಕಿಮರಿಯನ್ನು ಕುಕ್ಕಿ ಕುಕ್ಕಿ ಪುಕ್ಕ ಮುರಿದ ದೃಶ್ಯ ನನ್ನೊಳಗೆ ಎಂಥಾ ಸ್ಪಂದನೆಯನ್ನು ಉಂಟುಮಾಡಿತ್ತೆಂದರೆ– ಅದು ಎಷ್ಟು ಪ್ರೇಮಭರಿತವೋ ಅಷ್ಟೇ ಸೌಂದರ್ಯಪೂರಿತವೆಂದು ಅರಿಯಲು ನಾನು ಮಾಡಿದ ಸಾಧನೆ ಸಾಮಾನ್ಯದ್ದಲ್ಲ. ಕ್ರಮೇಣ ನನ್ನ ಕೈಗಳನ್ನು ಪ್ರೀತಿಸಲು ಕಲಿತೆ. ಆ ಕೈಗಳಿಂದ ಸೃಷ್ಟಿಸುವುದು, ಶ್ರಮಿಸುವುದು, ಸೇವಿಸುವುದು ಹೇಗೆಂದು ಅರಿತೆ. ಇದೆಲ್ಲವೂ ಸಿದ್ಧಿಸಲು ಹತ್ತುವರ್ಷಕ್ಕಿಂತಲೂ ಹೆಚ್ಚು ಕಾಲವೇ ಹಿಡಿಯಿತು. ಅಂಥಾ ಕಠೋರ ದೀಕ್ಷೆಯದು. ಶ್ರಮ ಫಲಿಸಿದ ಮೇಲೆ ಈ ತೋಟವನ್ನು ಬೆಳೆಸತೊಡಗಿದೆ' ತನ್ನ ಜೀವನಯಾನದ ಸತ್ಯ–ಸೌಂದರ್ಯವನ್ನು ಸೀತೆಯ ಮುಂದೆ ಬಿಚ್ಚಿಟ್ಟಳು ಶೂರ್ಪನಖಿ.

'ನಿಜಕ್ಕೂ ನೀನೆಷ್ಟು ಸುಂದರವಾಗಿರುವೆ ಶೂರ್ಪನಖಿ. ನಿನ್ನ ಸೌಂದರ್ಯವನ್ನು ಯಾವ ಗಂಡಸೂ ಗ್ರಹಿಸದಿರಬಹುದು. ಆದರೆ–' ಸೀತೆಯ ಕೊರಳು ಗದ್ಗದಿತವಾಯಿತು. ತನ್ನ ಅಗ್ನಿಪರೀಕ್ಷೆಗಿಂತಲೂ ಶೂರ್ಪನಖಿ ಎದುರಿಸಿದ ಪರೀಕ್ಷೆ ಕಡಿಮೆಯೇನಲ್ಲ ಎಂದುಕೊಳ್ಳುತ್ತಲೇ ಸೀತೆಯ ಕಣ್ಣಲ್ಲಿ ನೀರು ಹನಿಯಿತು. ಶೂರ್ಪನಖಿ ಅಂದವಾಗಿ, ಆನಂದಭರಿತವಾಗಿ ನಕ್ಕಳು.

'ಗಂಡಸಿಗೆ ಮಾತ್ರ ಕಣ್ಣಿರಲಾರವಾ? ಮನಸ್ಸು ಇರಲಾರದಾ? ಕುರೂಪಿಗಳನ್ನಾಗಿಸುವುದೂ, ಮತ್ತೆ ಅವರ ಮೇಲೆ ಅಸಹ್ಯಪಟ್ಟುಕೊಳ್ಳುವುದೂ ಮಾತ್ರ ಗೊತ್ತಿರುವ ಗಂಡಸರ ಬಗ್ಗೆ ಅಲ್ಲ ನಾನು ಮಾತನಾಡುತ್ತಿರುವುದು'

'ಓ! ಅಂದರೆ–' ಸೀತೆ ಅರ್ಧಕ್ಕೆ ಮಾತು ನಿಲ್ಲಿಸಿದಳು. ಆಕೆ, ಶೂರ್ಪನಖಿ ಏನು ಹೇಳಹೊರಟಿದ್ದಾಳೆಂದು ಊಹಿಸಿದಳು.

'ನಿನ್ನ ಊಹೆ ನಿಜವೇ ಸೀತಾ. ನನಗೊಬ್ಬ ಗಂಡಸಿನ ನಂಟು ದೊರೆತಿದೆ. ನನ್ನ ಕೈಗಳಿಂದ ಪ್ರಕೃತಿಯೊಳಗೆ ಹರಿಯುವ ಈ ಸೌಂದರ್ಯವನ್ನು ಸ್ವಲ್ಪಕಾಲ ತನ್ನದಾಗಿಸಿಕೊಂಡು, ತನ್ನನ್ನು ನನಗರ್ಪಿಸಿಕೊಳ್ಳುವ ಅದೃಷ್ಟವಂತನೊಬ್ಬ ಸಿಕ್ಕಿದ್ದಾನೆ' ಎನ್ನುತ್ತಾ ಶೂರ್ಪನಖಿ ಕೊರಳೆತ್ತಿ 'ಸುಧೀರಾ' ಎಂದು ಪ್ರೀತಿಯಿಂದ ಕರೆದಳು. ಸಾರ್ಥಕ ನಾಮಧೇಯದ ದೃಢಕಾಯನೊಬ್ಬನು ಅಲ್ಲಿಗೆ ಬಂದನು.

'ಈಕೆ ಸೀತೆ' ಎಂದು ಹೇಳಿದಳು ಶೂರ್ಪನಖಿ ಸುಧೀರನಿಗೆ. ಸುಧೀರನು ಗೌರವದಿಂದ ಸೀತೆಗೆ ನಮಸ್ಕರಿಸಿದನು.

'ಸೀತೆಗೆ ನಿನ್ನನ್ನು ತೋರಿಸಬೇಕೆಂದೇ ಕರೆದಿದ್ದೆ' ಆ ಮಾತಿಗೆ ಸುಧೀರನು ಹೊರಟುಹೋದನು.

ಇಲ್ಲಿಯವರೆಗೂ ಯಾವ ಗಂಡೂ–ಹೆಣ್ಣಿನ ಮಧ್ಯೆ ತಾನು ನೋಡಿರದ ಪವಿತ್ರ ಬಂಧನವೊಂದು ಇವರಿಬ್ಬರ ನಡುವೆ ಇದ್ದಂತನ್ನಿಸಿತು ಸೀತೆಗೆ.

'ನಿನ್ನ ಜೀವನವನ್ನು ಸಫಲವಾಗಿಸಿಕೊಂಡಿರುವೆ ಎಂದಾಯಿತು'

'ಸಾಫಲ್ಯಕ್ಕೆ ಅರ್ಥವು ಗಂಡಸಿನ ಸಾಂಗತ್ಯದಲ್ಲಿ ಇಲ್ಲವೆಂದು ಗ್ರಹಿಸಿದೆ ಸೀತಾ. ಅದು ಅರಿವಾದ ಮೇಲೆಯೇ ನನಗೆ ಈತನೊಂದಿಗೆ ನಂಟು ಬೆಳದಿದೆ' ಸೀತೆ ಶೂರ್ಪನಖಿಯ ಮಾತುಗಳನ್ನು ಶ್ರದ್ಧೆಯಿಂದ ಕೇಳುತ್ತಿದ್ದಳು. ಯಾವುದೋ ವಿವೇಕ, ಗಾಂಭೀರ್ಯ ಆಕೆಯ ಮಾತುಗಳಲ್ಲಿ. ಈ ಕಾರಣಕ್ಕೇ–ಮತ್ತೆ ಮತ್ತೆ ಕೇಳಬೇಕೆನಿಸುತ್ತಿದೆ.

'ಸೀತಾ–ಮತ್ತೆ ನೀನು?'

'ಮಕ್ಕಳನ್ನು ಬೆಳೆಸುವುದರಲ್ಲೇ ನನ್ನ ಜೀವನ ಸಾರ್ಥಕವಾಗುತ್ತದೆ'

'ಅದೇ ನಿನ್ನ ಜೀವನಾದರ್ಶವೇನು ?'

'ಹೌದು. ಎಷ್ಟಾದರೂ ನಾನು ರಾಮನ ಪತ್ನಿ. ಪಟ್ಟಮಹಿಷಿಯಾಗಿ ನನ್ನ ಜವಾಬ್ದಾರಿಗಳನ್ನು ನೆರವೇರಿಸಲಾಗಲಿಲ್ಲ. ರಾಮರಾಜ್ಯಕ್ಕೆ ವಾರಸುದಾರರನ್ನಾದರೂ ಒಪ್ಪಿಸಬೇಕಲ್ಲ.'

'ನೀನೆಂದೂ ಹೆಚ್ಚಾಗಿ ರಾಜ್ಯದಲ್ಲಿರದಿದ್ದರೂ, ನಿನ್ನ ಜೀವನವು ಹೇಗೆ ರಾಜ್ಯದೊಂದಿಗೆ ಅಂಟಿಕೊಂಡಿದೆಯೋ ನೋಡು ಸೀತಾ!'

'ರಾಜಪತ್ನಿಯಾದ ಮೇಲೆ ತಪ್ಪುವುದಿಲ್ಲವಲ್ಲ' ಸೀತೆ ನಕ್ಕಳು.

'ಏನೋ ಗೊತ್ತಿಲ್ಲ, ನನಗೆ ಮೊದಲಿನಿಂದಲೂ ರಾಜ್ಯವೆಂದರೆ ಭಯ. ನನ್ನ ಅಣ್ಣ ಎಷ್ಟು ಸಲ ಹೇಳಿದರೂ ನಾನು ಲಂಕಾನಗರಿಯಲ್ಲಿ ಇರುತ್ತಿರಲಿಲ್ಲ. ಇಂಥಾ ಅರಣ್ಯ ವಿಹಾರದ ನೆಮ್ಮದಿ ಮತ್ತೆಲ್ಲೂ ದೊರೆಯುವುದಿಲ್ಲ ಸೀತಾ'

'ನನಗೂ ಈ ಅರಣ್ಯವಾಸವೇ ಪ್ರೀತಿ. ರಾಮನು ಪರಿತ್ಯಜಿಸಿದರೂ ಇಲ್ಲಿಯ ವಾಸವು ನನ್ನ ದುಃಖವನ್ನು ತಗ್ಗಿಸಿದೆ'

ಹೀಗೆ ಮಾತಾಡುತ್ತಿದ್ದ ಇಬ್ಬರಿಗೂ ಸಮಯ ಉರುಳಿದ್ದೇ ಗೊತ್ತಾಗಲಿಲ್ಲ.

'ನಿನ್ನ ಮಕ್ಕಳಿಗೆ, ಅವರು ಶ್ರೀರಾಮಚಂದ್ರನ ತನಯರೆಂದು ಗೊತ್ತಾ ?'

'ಇಲ್ಲ. ಅವರಿಗದು ಗೊತ್ತಿಲ್ಲ. ನಾನೆಂದೂ ಹೇಳಲಿಲ್ಲ. ಗೊತ್ತಾಗಲೇಬೇಕಾದ ದಿನ ಬಂದಾಗ ಗೊತ್ತಾಗದೆ ಇದ್ದೀತೆ?'

'ಗೊತ್ತಾದ ಮೇಲೆ ಈ ಅರಣ್ಯದಲ್ಲಿ ಕ್ಷಣವಾದರೂ ನಿಲ್ಲುವರೇನು?'

ಶೂರ್ಪನಖಿ ಸೀತೆಯತ್ತ ಕನಿಕರದಿಂದ ನೋಡಿದಳು.

'ಅವರಿಗೂ ಈ ಅರಣ್ಯವಾಸ ಪ್ರಿಯವಾದುದೇ' ಬಲಹೀನ ದನಿಯಲ್ಲಿ ಉತ್ತರಿಸಿದಳು ಸೀತೆ.

'ಅವರಿಗೆ ಪ್ರಿಯವಿರಬಹುದು ಸೀತಾ. ಆದರೆ ರಾಜ್ಯಕ್ಕೆ ಅರಣ್ಯವೆಂದರೆ ಪ್ರಿಯವೆಂದುಕೊಂಡೆಯೇನು? ನಗರಗಳ ಅಭಿವೃದ್ಧಿಗಾಗಿ, ನಾಗರಿಕರ ರಕ್ಷಣೆಗಾಗಿ ಈ ಅರಣ್ಯಪುತ್ರರು ಅಲ್ಲಿಗೆ ಹೋಗುವುದು ತಪ್ಪುವುದಿಲ್ಲವೇನೋ' ತಪ್ಪುವುದಿಲ್ಲವೆಂದು ಸೀತೆಗೂ ಗೊತ್ತು.

'ಆಗ ಏನು ಮಾಡುವೆ ಸೀತಾ? ಒಬ್ಬಂಟಿ ವಾಲ್ಮೀಕಿಯ ಆಶ್ರಮದಲ್ಲೇ ಇದ್ದುಬಿಡುವೆಯಾ?'

'ಇಲ್ಲ ಶೂರ್ಪನಖಿ, ನನ್ನ ತಾಯಿ ಭೂದೇವಿಯ ಆಶ್ರಯ ಪಡೆಯುತ್ತೇನೆ'

'ಸೀತಾ, ನಿನ್ನ ತಾಯಿ ಎಲ್ಲಿ ಇಲ್ಲ ಹೇಳು? ಆದರೆ ನಿನ್ನ ತಾಯಿಯ ರೂಪ ಇಲ್ಲಿಯದಕ್ಕಿಂತ ಸುಂದರವಾಗಿ ಮತ್ತೆಲ್ಲೂ ಇರಲಾರದೆಂದೆನಿಸುತ್ತದೆ ನನಗೆ'

ಶೂರ್ಪನಖಿ ಹೆಮ್ಮೆಯಿಂದ ತೋಟದ ತುಂಬೆಲ್ಲ ಕಣ್ಣಾಡಿಸಿದಳು. ಶೂರ್ಪನಖಿಯ ಉದ್ದೇಶವೇನೆಂದು ಅರ್ಥವಾದಂತೆ ಸೀತೆ ಮುಗುಳು ನಕ್ಕಳು. ಆ ಅಯಾಚಿತ ಆದರಣೆಗೆ ಆಕೆ ಮನಸ್ಸು ಉಕ್ಕೇರಿತು. ಸಹೋದರಿ ಭಾವವು ಮನದುಂಬಿ ಬಂತು.

'ಖಂಡಿತ ಬರುತ್ತೇನೆ ಶೂರ್ಪನಖಿ. ನನ್ನ ಮಕ್ಕಳು ನನ್ನನ್ನು ತೊರೆದು ನಗರಕ್ಕೆ ಹೋದ ಬಳಿಕ ನಾನು ಭೂಪುತ್ರಿಯಾಗುತ್ತೇನೆ. ಆಗ ನಿನ್ನ ಬಳಿಯೇ ಬಂದು ಇದ್ದುಬಿಡುತ್ತೇನೆ. ಈ ತಣ್ಣನೆಯ ತರುಗಳ ನೆರಳಲ್ಲಿ ದಣಿವಾರಿಸಿಕೊಳ್ಳುತ್ತಾ ಬದುಕಿಗೊಂದು ಹೊಸ ಅರ್ಥಕಂಡುಕೊಳ್ಳುತ್ತೇನೆ' ಕುಶ ಲವರಿಬ್ಬರೂ ಬರುವುದನ್ನು ಕಂಡು ಅವರು ಮಾತು ನಿಲ್ಲಿಸಿದರು.

ಶೂರ್ಪನಖಿ ಅವರಿಗೆ ಸಿಹಿಯಾದ ಹಣ್ಣುಗಳನ್ನು ನೀಡಿದಳು. ಇಬ್ಬರೂ ಪ್ರೀತಿಯಿಂದ ಸವಿದರು.

'ಯಾರಮ್ಮಾ ಆಕೆ?' ದಾರಿಯ ನಡುವಲ್ಲಿ ತಾಯಿಯನ್ನು ಕೇಳಿದರು ಮಕ್ಕಳಿಬ್ಬರೂ.

'ನನಗೆ ತುಂಬಾ ಬೇಕಾದವಳು ಕಂದಾ. ತುಂಬಾ ಆಪ್ತಳು'

'ಮತ್ತೆ ನಮಗೆ ಈ ಮುಂಚೆ ಎಂದೂ ಹೇಳಲಿಲ್ಲವೇಕಮ್ಮಾ?'

'ಕಾಲ ಕೂಡಿ ಬಂದಾಗ ಎಲ್ಲಾ ಗೊತ್ತಾಗುತ್ತದೆ. ಆದರೆ ಈ ಅರಣ್ಯದಲ್ಲಿ, ಈ ಉದ್ಯಾನವನದ ದಾರಿಯನ್ನು ಎಂದೂ ಮರೆಯಬೇಡಿ. ನೀವು ಎಲ್ಲಿಗೆ ಹೋದರೂ, ಏನು ಮಾಡಿದರೂ ಈ ದಾರಿಯ ಜಾಡು ನಿಮಗೆ ನೆನಪಿರಲೇಬೇಕು. ಮರೆಯುವುದಿಲ್ಲ ತಾನೆ?'

'ಮರೆಯುವುದಿಲ್ಲಮ್ಮಾ' ಲವಕುಶರಿಬ್ಬರೂ ತಾಯಿಗೆ ಮಾತು ಕೊಟ್ಟರು. ■